ಸರಿ ಮಾಡೋಣ. ೬ ತಿಂಗಳಲ್ಲಿ ನಾವು ಎನು ಪ್ಯಾರಾ ಮೀಟರ್ಸ್ ಮಾಡಬೇಕೆಂದು ಹೇಳುತ್ತೇವೆ I take it as a challenge.. ತಾವು ಇದನ್ನು ಒಪ್ಪಿಕೊಳ್ಳಿ. ಅದನ್ನು ಬಿಟ್ಟು ರಾಜ್ಯದ ಜನತೆಯ ಮೇಲೆ ಬೆಲೆಗಳು ಏರಿಸತಕ್ಕಂಥಾದ್ದು ಸರಿಯಲ್ಲ. ಜನಸಾಮಾನ್ಯರಿಗೆ, ವೈದ್ಯರಿಗೆ, ಯುವಕರಿಗೆ, ನಿರುದ್ಯೋಗಿಗಳಿಗೆ ವಿದ್ಯಾರ್ಥಿಗಳಿಗೆ ಸಾಮಾನ್ಯ ಜನಗಳಿಗೆ ಬಹಳ ತೊಂದರೆ ಆಗಿದೆ. ತಾವು ಇನ್ನೂ ಸಾರಿಗೆ ಸಂಸ್ಥೆ ಬಗ್ಗೆ ತಿಳಿದುಕೊಳ್ಳುವ ವಿಚಾರಗಳು ಜಾಸ್ತಿ ಇವೆ. ಅಲ್ಲಿರತಕ್ಕಂಥ ಕೆಲವು ವಿಚಾರಗಳನ್ನು ಮಾತ್ರ ನಾನು ತಮಗೆ ಹೇಳಿದೆ. ರಿಕ್ರೂಟ್‌ಮೆಂಟ್ಸ್ ಬಗ್ಗೆ ಮಾನ್ಯ ಬೈರೇಗೌಡರು ಹೇಳಿದರು. ನಿಜ. ಇದರ ಬಗ್ಗೆ ಎನು ಮಾಡಬೇಕು ಎಂದು ಮಾತನಾಡತಕ್ಕಂಥಾದ್ದು ಇದೆ. ನಾನು ಕೊಟ್ಟ ಸಲಹೆಗಳನ್ನು ಇಂಪ್ಲಿಮೆಂಟ್ ಮಾಡಿ. ಇನ್ನು ಅನೇಕ ಸಲಹೆಗಳು ಇವೆ. ಸಮಯ ಬೇಕಾಗುತ್ತದೆ. ಸಮಯ ಇಲ್ಲ. ನಾವು ನಿಮ್ಮ ಮನಸ್ಸನ್ನು ಹೊಲಿಸಿಕೊಳ್ಳಲು ಪ್ರಯತ್ನ ಮಾಡಿದ್ದೇವೆ. ನಿಲುವಳಿ ಸೂಚನೆ ಬಗ್ಗೆ ತಾವು ದಯವಿಟ್ಟು ಅವಕಾಶ ಕೊಡಿ. ಬಹಳ ಮಹತ್ವದ ವಿಚಾರ. ಇಡೀ ರಾಜ್ಯದಲ್ಲಿ, ಪ್ರತಿನಿತ್ಯ ೫೮ ಲಕ್ಷ ಜನರು ನಮ್ಮಲ್ಲಿರತಕ್ಕಂಥ ನಾಲ್ಕುವರೆ ಕೋಟಿ ಜನಸಂಖ್ಯೆಯಲ್ಲಿ ೯ ಜನಗಳಿಗೆ ಇಬ್ಬರು ಮಾತ್ರ ಪ್ರಯಾಣ ಮಾಡುತ್ತಾರೆ. ಇದು ಬಹಳ ಮುಖ್ಯವಾದ ವಿಚಾರ. ಇದಕ್ಕಿಂತ ಯಾವುದೂ ಮುಖ್ಯವಾದಂತಹ ವಿಚಾರ ಸಿಗುವುದಿಲ್ಲ. ಈ ವಿಚಾರದಲ್ಲಿ ಬಹುಶಃ ಆಡಳಿತ ಪಕ್ಷದವರದ್ದು ಬಿನ್ನಾಭಿಪ್ರಾಯ ಇಲ್ಲ ಅವರಿಗೂ ಚುನಾವಣೆ ಹತ್ತಿರ ಬರುತ್ತಿದೆ. ಅವರೂ ಸಹ ಚುನಾವಣೆಯನ್ನು ಎದುರಿಸಬೇಕಾಗುತ್ತದೆ. ಜನಸಾಮಾನ್ಯರ ಹತ್ತಿರ ಹೋಗಬೇಕಾಗುತ್ತದೆ. ಆ ಕಾರಣದಿಂದ ತಮ್ಮ ಮನಸ್ಸು ಹೊಲಿಸಿಕೊಳ್ಳಲು ಪ್ರಯತ್ನ ಮಾಡಿದ್ದೇವೆ. ಇನ್ನು ಹೆಚ್ಚು ವಿಚಾರ ಹೇಳತಕ್ಕಂಥಾದ್ದು ಇದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದು ಗಂಟೆ ಕ್ವೊಶ್ಚನ್ ಅವರ್ ಏನಿದೆ ಅದರಲ್ಲಿ ೨೦ ಪ್ರಶ್ನೆಗಳನ್ನು ಮುಗಿಸಬೇಕಾಗುತ್ತದೆ. ಇದರಿಂದ ಲಾಸ್ಟ್ ಪ್ರಶ್ನೆ ಇರುವವರಿಗೆ ಕಷ್ಟವಾಗುತ್ತದೆ. ನಾವು ಎಷ್ಟೋ ಸಾರಿ ನೋಡಿದ್ದೇವೆ, ೬ ರಿಂದ ೧೦ ಪ್ರಶ್ನೆಗಳು ಮುಗಿಯುತ್ತವೆ ಆನಂತರ ಉಳಿದ ಪ್ರಶ್ನೆಗಳು ಒಂದು ಗಂಟೆಯಲ್ಲಿ ಮುಗಿಯುವುದಿಲ್ಲ. ಆದುದರಿಂದ ಇದರ ಬಗ್ಗೆ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಬೇಕಾಗುತ್ತದೆ. ಅಥವಾ ಒಂದು ಪ್ರಶ್ನೆಗೆ ೨ ಮಿನಿಟ್ ಅಥವಾ ೩ ಮಿನಿಟ್ ಎಂದು ನಿರ್ದಿಷ್ಟವಾಗಿ ಸಮಯವನ್ನು ಫಿಕ್ಸ್ ಮಾಡಬೇಕಾಗುತ್ತದೆ. ಹಾಗೆ ಮಾಡಿದರೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರುತ್ತದೆ. ಇವತ್ತು ಬಹಳ ಇಂಪಾರ್ಟೆಂಟ್ ಕ್ವೊಶ್ಚನ್ಸ್ ಇವೆ. ಅವುಗಳಿಗೆ ಉತ್ತರ ಇಲ್ಲವಾಗಿದೆ. ಇದೇ ಸದನದಲ್ಲಿ ಪುನಃ ಆ ಪ್ರಶ್ನೆಗಳು ಬರಲಿಕ್ಕೆ ಸಾಧ್ಯವಿಲ್ಲ. ಸರ್ಕಾರ ಮತ್ತು ವಿರೋಧ ಪಕ್ಷಗಳು ಏನು ಮಾಡುತ್ತಿದೆಯೆಂದು ಜನಕ್ಕೆ ಗೊತ್ತಾಗಬೇಕಾಗಿದೆ. ಆದುದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಸಾಧ್ಯವಿದ್ದರೆ ಈ ಪ್ರಶ್ನೆಗಳಿಗೆ ತಾವು ಅವಕಾಶ ಮಾಡಿಕೊಡಿ. ಇವು ಬಹಳ ಮುಖ್ಯವಾದ ಪ್ರಶ್ನೆಗಳು ಇವೆ. ಯಾವುದೇ ಪ್ರಶ್ನೆಯನ್ನು ಒಂದು ಇತಿಮಿತಿಯೊಳಗೆ ಕೇಳಬೇಕಾಗುತ್ತದೆ. ಆದರ ಬಗ್ಗೆ ಸಂದೇಹವೇ ಇಲ್ಲ. ತಮ್ಮ ಸಲಹೆಯನ್ನು ನಾನು ಸಂಪೂರ್ಣವಾಗಿ ಒಪ್ಪತ್ತೇನೆ. ಯಾವ ಸದಸ್ಯರು ಇವತ್ತು ಪ್ರಶ್ನೆ ಹಾಕಿದ್ದಾರೋ ಅವರಿಗೂ ಅವಕಾಶ ಸಿಗಬೇಕಾಗುತ್ತದೆ. ಆ ದೃಷ್ಟಿಯಿಂದ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ ಮತ್ತು ಸಮಯ ನಿಗದಿಯಾಗಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮ ತೀರ್ಪನ್ನು ನಾವು ವಿರೋಧ ಮಾಡುತ್ತಿಲ್ಲ.

ಅಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರು ಹೇಳಿದರು, ಈ ವಿಷಯವನ್ನು ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡುತ್ತೇವೆ. ಚರ್ಚೆ ಮಾಡಿದ ನಂತರ ತೀರ್ಮಾನ ತಗೆದುಕೊಳ್ಳಲಾಗುತ್ತದೆ. ಸದನದಲ್ಲಿ ಪ್ರಶ್ನೆ ಕೇಳುವ ಎಲ್ಲಾ ಸದಸ್ಯರಿಗೆ ಅವಕಾಶ ಸಿಗಬೇಕು

ಎನ್ನುವ ದೃಷ್ಟಿಯಿಂದ ನಾನು ತಮ್ಮಲ್ಲಿ ಕೇಳಿಕೊಂಡೆ. ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಪ್ರಶ್ನೆಗೆ ಇತರ ಸದಸ್ಯರು ಉಪ ಪ್ರಶ್ನೆಗಳನ್ನು ಕೇಳುವುದರಿಂದ ಸಮಯ ಹೆಚ್ಚು ಹೋಗುತ್ತದೆ. ಪ್ರತಿಯೊಂದು ಪ್ರಶ್ನೆಗೂ ಬೇರೆಯವರು ಉಪ ಪ್ರಶ್ನೆ ಕೇಳುವುದಕ್ಕೆ ಹೋದರೆ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ತಾವೆಲ್ಲರೂ ಸಹಕರಿಸಬೇಕು. ಈ ವಿಷಯವನ್ನು ನಾನು ಮುಂದಿನ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಇಟ್ಟುಕೊಂಡು ಅದನ್ನು ಸರಿಪಡಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ:- ನಾವು ಸಹಕರಿಸುವುದಿಲ್ಲವೆಂದಲ್ಲ, ಪೂರ್ಣವಾಗಿ ಇನ್ನು ಮುಂದೆ ಸಹಕರಿಸುತ್ತೇವೆ. ಈಗ ಉಳಿದಿರುವ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅಧ್ಯಕ್ಷರೆ, ಲ್ಯಾಪ್ಸ್ ಆಗಿರುವ ಕ್ವೊಶ್ಚನ್‌ಗಳನ್ನು ಹೆಲ್ಡ್ ಓವರ್ ಮಾಡಿ ಮುಂದಿನ ದಿನಕೆ ಹಾಕಿಕೊಳ್ಳಿ.

ಅಧ್ಯಕ್ಷರು:- ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಚುಕ್ಕೆ ಗುರುತಿಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸಿದ್ದೇವೆಂದು ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಉತ್ತರಗಳನ್ನು ನಮಗೆ ಕಳುಹಿಸಿಕೊಟ್ಟಿಲ್ಲ. ಇದರ ಬಗ್ಗೆ ಅನೇಕ ಸಾರಿ ಹೇಳಿದ್ದೇವೆ. ಈ ಕ್ಷಣದವರೆಗೂ ಉತ್ತರಗಳು ಬಂದಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ:- ಇವೊತ್ತಿನ ದಿವಸದ ನಮ್ಮ ಕ್ವೊಶ್ಚನ್ಸ್ ಬಂದಿಲ್ಲ. ಹೀಗಾದರೆ ನಾವು ಹೇಗೆ ಸಹಕರಿಸಬೇಕು? ಹೋದ ಅಸೆಂಬ್ಲಿಯಲ್ಲೂ ಉತ್ತರ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಈ ನಮ್ಮ ಪ್ರಶ್ನೆಗಳು ಬದುಕಿದ್ದಾವೋ ಸತ್ತಿದ್ದಾವೋ ಅದನ್ನಾದರೂ ಹೇಳಿ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲ. ಇಲ್ಲಿ ಉತ್ತರ ಇಟ್ಟಿದ್ದೇವೆಂದು ಅವರು ಹೇಳುತ್ತಾರೆ. ತಮಗೆ ಕೈ ಮುಗಿದು ಕೇಳುತ್ತೇನೆ, ಎಲ್ಲಿದೆ ಉತ್ತರ? ನನ್ನ ಪ್ರಶ್ನೆಗಳಿಗೆ ಉತ್ತರ ನೋಡೋಣವೆಂದರೆ ಉತ್ತರ ಎಲ್ಲಿದೆ?

ಶ್ರೀ ಎಸ್.ಹೆಚ್. ಕೌಜಲಗಿ:- ಉತ್ತರವೇ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಉತ್ತರ ಇಟ್ಟಿದ್ದೇವೆಂದರೆ, ಉತ್ತರ ಇರಬೇಕಲ್ಲಾ? ಅದು ಸ್ಪಷ್ಟವಾಗಬೇಕು.

ಶ್ರೀ ವಾಟಾಳ್ ನಾಗರಾಜ್:- ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಉತ್ತರ ಇಲ್ಲ. ಈ ಬಗ್ಗೆ ನಾವು ಕೇಳುತ್ತೇವೆ. ಉತ್ತರಗಳಿಲ್ಲದ ಮೇಲೆ ಈ ಪುಸ್ತಕ ನಮಗೆ ಏಕೆ ಬೇಕು?

(ಪ್ರಶ್ನೆಗಳ ಪಟ್ಟಿಯನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಸದನದಲ್ಲಿ ಹರಿದು ಹಾಕಿದರು)

ಇದು ಸರಿಯಲ್ಲ. ಇದರಿಂದ ನಮಗೆ ನೋವಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಇವೊತ್ತು ಪ್ರಶ್ನೆಗಳನ್ನು ಎಲ್ಲವನ್ನೂ ಮುಗಿಸುವುದಕ್ಕೆ ಆಗಲಿಲ್ಲ. ಎಷ್ಟೋ ಜನ ಸದಸ್ಯರು ತಮ್ಮ ಪ್ರಶ್ನೆಗಳನ್ನು ಕೇಳುವುದಕ್ಕೆ ಆಗಲಿಲ್ಲ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಇಡಬೇಕು. ಆದರ ಪೈಕಿ ೪೬ ಪ್ರಶ್ನೆಗಳ ಪೈಕಿ ೩೦ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಹೀಗೆ ಆದರೆ ಹೇಗೆ?

ಅಧ್ಯಕ್ಷರು:- ಈಗಾಗಲೇ ೪೬ ಪ್ರಶ್ನೆಗಳ ಪೈಕಿ ೩೩ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಇನ್ನೂ ೧೩ ಪ್ರಶ್ನೆಗಳಿಗೆ ಉತ್ತರ ಬರಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಉತ್ತರ ಬಂದಿಲ್ಲ. ಈ ಬಗ್ಗೆ ಈ ಸದನದಲ್ಲಿ ನಾವು ಹಲವಾರು ಬಾರಿ ಹೇಳಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಬಿಎಸಿ ಯಲ್ಲಿ ಒಂದು ತೀರ್ಮಾನ ಆಗಬೇಕು. ಏಕೆಂದರೆ ಇವರು ಸರಕಾರದವರು ಉತ್ತರ ಕೊಟ್ಟಿಲ್ಲ ಎಂದು ಹೇಳುವುದು, ದೋಷಾರೋಪಣೆ ಮಾಡುವುದು ಬೇಡ. ನಾವು ಉತ್ತರವನ್ನು ಕೊಟ್ಟಿದ್ದೇವೆ. ಹೀಗೆ ಇಲ್ಲಿ ತಪ್ಪು, ಅಲ್ಲಿ ತಪ್ಪು, ಎಂದು ಹೇಳುವುದು ಬೇಡ, ಇದರಲ್ಲಿ ಸೆಕ್ರೇಟರಿಯೇಟ್‌ನ ತಪ್ಪೂ ಇಲ್ಲ. ನಾವು ಉತ್ತರವನ್ನು ಕೊಟ್ಟಿದ್ದೇವೆ. ಅದನ್ನು ಕಂಪೈಲ್ ಮಾಡಿಕೊಂಡು ಅವರು ಇವತ್ತೇ ತಮಗೆ ಒದಗಿಸುತ್ತಾರೆ. ಆದರೆ ಇಲ್ಲಿ ಒಂದು ತಪ್ಪು ಅಭಿಪ್ರಾಯವಾಗಿದೆ. ಹೀಗೆ ಸರಕಾರದವರು ಉತ್ತರವನ್ನು ಕೊಟ್ಟಿಲ್ಲ ಎಂಬ ಒಂದು ಅಭಿಪ್ರಾಯ ಬರಬಾರದು. ನಾನು ಇವೊತ್ತು ೪೬ ಪ್ರಶ್ನೆಗಳಲ್ಲಿ ೩೬ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದೇವೆ. ಕೊಡುವಂಥ ಉತ್ತರವನ್ನು ಈ ದಿವಸವೇ ಕೊಡಬೇಕೇ ಹಿಂದಿನ ದಿವಸ ಕೊಡಬೇಕೇ ಎಂಬ ವಿಚಾರ ತಮಗೆ ಬಿಟ್ಟಿದ್ದು. ಅದರ ಬಗ್ಗೆ ನಿರ್ಣಯ ಮಾಡುವುದು ತಮಗೆ ಬಿಟ್ಟಿದ್ದು. ನಾವು ಉತ್ತರವನ್ನು ಕೊಡುತ್ತೇವೆ. ಇದನ್ನು ಮೊದಲ ದಿವಸ ಹಂಚಬೇಕೆ? ಈ ದಿವಸ ಬೆಳಿಗ್ಗೆ ಹಂಚಬೇಕೇ ಎಂಬುದು ತಮಗೆ ಬಿಟ್ಟಿದ್ದು. ಆದರೆ ಹೀಗೆ ಸರ್ಕಾರಕ್ಕೆ ಒಂದು ಅಪವಾದ ಬೇಡ. ಈಗ ಇಷ್ಟು ಉತ್ತರವನ್ನು ಕೊಟ್ಟಿದ್ದೇವೆ. ಇನ್ನು ಮುಂದೆ ಉತ್ತರಗಳನ್ನು ಯಾವಾಗ ಕೊಡಬೇಕೆಂದು ತಾವು ನಿಗದಿ ಮಾಡಿ. ಒಂದು ವೇಳೆ ಆ ಕಾಲದಲ್ಲಿ ಉತ್ತರ ಕೊಡಲು ಆಗದಿದ್ದರೆ ನಾವು ಮೊದಲೇ ತಿಳಿಸುತ್ತೇವೆ. ಒಟ್ಟಿನಲ್ಲಿ ಈ ಬಗ್ಗೆ ಆತಂಕ ಬೇಡ. ಈಗ ಏನಾಗಿದೆ ಎಂದರೆ, ಬೆಳಿಗ್ಗೆ ಪ್ರಶ್ನೆ ಇರುತ್ತದೆ, ಉತ್ತರ ಇರುವುದಿಲ್ಲ. ಬಹುಶಃ ಮೊದಲನೇ ದಿವಸ ಎಷ್ಟು ಉತ್ತರ ಬರುತ್ತದೆ ಅದನ್ನು ಅಚ್ಚು ಹಾಕಿ ಬೆಳಿಗ್ಗೆ ಹಂಚಿಕೆಯಂಥ ಕೆಲಸವನ್ನು ಮಾಡಿದರೆ, ಬಹುಶಃ ಈ ಭಿನ್ನಾಭಿಪ್ರಾಯ ಇರುವುದಿಲ್ಲ. ಈ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವುಗಳು ನಿರ್ಧಾರ ಮಾಡಬೇಕು. ತಮ್ಮ ನಿರ್ಣಯಕ್ಕೆ ನಾವು ಬದ್ಧರಾಗಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೇ, ಸದನ ಕೆಲವು ಸದಸ್ಯರಿಗೆ ಮಾತ್ರ ಮೀಸಲಾಗಿದೆ ಎನ್ನುವ ಹಾಗೆ ಆಗಿದೆ. ಕೋಲಾರ, ಮಂಡ್ಯ, ಮಂಗಳೂರು, ಮೈಸೂರು, ಹಾಸನ ಹೀಗೆ ಹಳೆಯ ಮೈಸೂರು ಭಾಗದವರಿಗೆ ಮಾತ್ರ ಅವಕಾಶ ಸಿಗುತ್ತದೆ, ನಮಗೆ ಅವಕಾಶ ಸಿಗುತ್ತಾ ಇಲ್ಲ ಹೀಗೆ ಆಗಬಾರದು, ನಮಗೂ ಅವಕಾಶಸಿಗಬೇಕು.

<u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

I. <u>ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯ ಮಂತ್ರಿ)ಮಾನ್ಯ ಅಧ್ಯಕ್ಷರೆ.</u>

<u>೧೯೬೫ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ ಕಲಂ ೭೧(೪)ರ ಮೇರೆಗೆ:</u>

೧) ೧೯೬೮ನೇ ಇಸವಿಯ ಕರ್ನಾಟಕ ಅಬಕಾರಿ (ಅಬಕಾರಿ ತೆರಿಗೆ ಹಾಗೂ ಹಕ್ಕು ಶುಲ್ಕ) ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ ೨೧-೧೧-೧೯೯೨ರಂದು ಹೊರಡಿಸಲಾದ ಎಫ್‌ಡಿ: ೧೭:ಪಿಇಎಸ್:೯೨ನೇ ಕ್ರಮಾಂಕದ ಅಧಿಸೂಚನೆ.

<u>೧೯೬೮ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಅಧಿನಿಯಮದ ೪(೩)ರ ಕಲಂ ಮೇರೆಗೆ:</u>

೨) ೧೯೯೨ನೇ ಇಸವಿಯ ಕರ್ನಾಟಕ ರಾಜ್ಯ ಮೀಸಲು ಆರಕ್ಷಕ (ನೇಮಕಾತಿ ಮತ್ತು ಸೇವಾ ಷರತ್ತುಗಳ) (ತಿದ್ದುಪಡಿ) ನಿಯಮಾವಳಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ